ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ಅನೇಕ ಕೇಂದ್ರಗಳನ್ನು ಮಾಡಿದಾಗ್ಯೂ ಸಹಿತ ಸರಿಯಾದ ದೃಷ್ಟಿಯಲ್ಲಿ ಉತ್ಪಾದನೆ, ಮತ್ತು ಸರಿಯಾದ ಲಾಭ ಕಂಡುಬರುತ್ತಿಲ್ಲ. ಇದರ ಬಗ್ಗೆ ಕ್ರಮ ತೆಗೆದು ಕೊಳ್ಳಲಾಗುತ್ತಿದೆಯೇ ?

ಶ್ರೀ ಕೆ, ಎಂ. ಕೃಷ್ಣಾರೆಡ್ಡಿ.—ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಉಕ್ಕಿನ ದರ ಕರಾರು ನಿಗದಿಯ ಬಗ್ಗೆ

೧೭೯ (೪೮೪) ಶ್ರೀ ಕೆ.ಜೆ. ಜಾರ್ಜ್ (ಭಾರತೀನಗರ).—ಮಾನ್ಯ ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಸರಕು ಖರೀದಿ ಇಲಾಖೆಯಲ್ಲಿ ಉಕ್ಕಿಗೆ ನಿಗದಿಪಡಿಸಿರುವ ದರ ಕರಾರು ಎಷ್ಟು ?

ಆ) ಸರಬರಾಜುದಾರನ ಹೆಸರು ಮತ್ತು ಅವರು ತಯಾರಕರೇ ?

ಇ) ಮಾರುಕಟ್ಟೆಯ ದರ ಕಡಿಮೆಯೆಂಬುದು ಸರ್ಕಾರಕ್ಕೆ ತಿಳಿದಿದೆಯೇ ?

ಈ) ಸರ್ಕಾರ ಖರೀದಿಸಿರುವ ಉಕ್ಕಿನ ಮೊತ್ತವೇನು ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಸರಕು ಖರೀದಿ ಇಲಾಖೆಯು ಉಕ್ಕಿಗೆ ದರ ಕರಾರನ್ನು ನಿಗಧಿಪಡಿಸುವುದಿಲ್ಲ. ಕೇಂದ್ರ ಸರ್ಕಾರದ ಜಾಯಿಂಟ್ ಪ್ಲಾಂಟ್ ಸಮಿತಿಯು ಉಕ್ಕಿನ ವಾರಾಟದ ಬೆಲೆಯನ್ನು ನಿರ್ಧರಿಸುತ್ತದೆ.

ಆ) ಇ) ಈ) ಉದ್ಭವಿಸುವುದಿಲ್ಲ.

ಶ್ರೀ ಕೆ.ಜೆ. ಜಾರ್ಜ್.—ಅಧ್ಯಕ್ಷರೇ, ನಮ್ಮ ರಾಜ್ಯಸರ್ಕಾರದವರು ಕೋಟ್ಯಾಂತರ ರೂಪಾಯಿ ಗಳ ಉಕ್ಕನ್ನು ಒಂದು ವರ್ಷಕ್ಕೆ ಕೊಂಡುಕೊಳ್ಳುತ್ತಿದ್ದಾರೆ. ಇಲ್ಲಿ ಅವರ ಉತ್ತರದಲ್ಲಿ ''ಕೇಂದ್ರ ಸರ್ಕಾರದ ಜಾಯಿಂಟ್ ಪ್ಲಾಂಟ್ ಸಮಿತಿಯು ಉಕ್ಕಿನ ವಾರಾಟದ ಬೆಲೆಯನ್ನು ನಿರ್ಧರಿಸುತ್ತದೆ'' ಎಂದು ಹೇಳಿದ್ದಾರೆ. ಈ ರಾಜ್ಯಕ್ಕೆ ಒದಗಿಸುವ ಉಕ್ಕಿಗೆ ಮತ್ತು ಅದರ ರೇಟ್ ವಾರ್ಕೆಟ್ ರೇಟಿಗಿಂತ ಜಾಸ್ತಿ ಇದೆಯೇ ?

ಶ್ರೀ ಜೆ.ಹೆಚ್. ಪಟೇಲ್.—ಅಧ್ಯಕ್ಷರೇ, ಸ್ಟೀಲ್ ರೇಟನ್ನು ಸ್ಟೋರ್ಸ್ ಪರ್ಚೇಸ್ ಡಿಪಾರ್ಟ್‌ಮೆಂಟ್‌ನವರು ನಿಗದಿ ಮಾಡುವುದಿಲ್ಲ. ನಮಗೆ ಯಾವ ಯಾವ ಡಿಪಾರ್ಟ್‌ಮೆಂಟ್‌ಗೆ ಎಷ್ಟು ವಸ್ತು ಗಳು ಬೇಕು, ಯಾವ ಸ್ಟಾಂಡರ್ಡ್ ವಸ್ತುಗಳು ಬೇಕು ಎಂಬುದನ್ನೆಲ್ಲಾ ಕೇಳುತ್ತಾರೆ. ಅನಂತರ ಟೆಂಡರ್ ಕರೆದ ಮೇಲೆ ಕ್ವಾಲಿಟಿ, ಸಪ್ಲೈ ಪೊಸಿಷನ್ ಎಲ್ಲಾ ನೋಡಿಕೊಂಡು ಟೆಂಡರುದಾರರಿಗೆ ವಹಿಸಿ ಕೊಡುತ್ತಾರೆ.

ಶ್ರೀ ಕೆ.ಜೆ. ಜಾರ್ಜ್.—ಅಧ್ಯಕ್ಷರೇ, ನಾನು ಕೇಳಿದ್ದು, ಸ್ಟೀಲ್ ರೇಟ್ ಅಲ್ಲ, ಸ್ಟೀಲ್‌ನಿಂದ ಉತ್ಪಾದನೆಯಾಗುವ ಉತ್ಪನ್ನಗಳ ರೇಟ್. ಅದನ್ನು ಯಾರು ಸಪ್ಲೈ ಮಾಡುತ್ತಾರೆ ? ಮಾರ್ಕೆಟ್ ರೇಟ್‌ಗಿಂತ ಜಾಸ್ತಿ ದರದಲ್ಲಿ ಸರ್ಕಾರದವರು ಇದನ್ನು ಪರ್ಚೇಸ್ ಮಾಡುತ್ತಿದ್ದಾರೆ ಎಂದು ಕೇಳಿದ್ದೇನೆ. ಸ್ಟೀಲ್ ರೇಟ್ ಕೇಳಿದ್ದಾರೆ ಎಂದು ಅವರು ಟೆಕ್ನಿಕಲ್ ಆಗಿ ಆನ್ಸರ್ ಮಾಡಬಹುದು. ನಾನು ಕೇಳಿದ್ದು ಸ್ಟೀಲ್‌ನಿಂದ ತಯಾರಾಗತಕ್ಕ ಉತ್ಪನ್ನಗಳ ಬಗ್ಗೆ ಅದಕ್ಕೆ ಉತ್ತರ ಹೇಳಬೇಕು.

ಶ್ರೀ ಜೆ.ಹೆಚ್. ಪಟೇಲ್.—ಟೆಕ್ನಿಕಲ್ ಆಗಿ ಸಮಾಧಾನಪಡಿಸುವುದಕ್ಕೆ ನಾನು ಹೋಗುತ್ತಿಲ್ಲ. ಮಾನ್ಯ ಸದಸ್ಯರು ಯಾವುದಾದರೂ ಇಲಾಖೆಯ ಖರೀದಿ ಬಗ್ಗೆ ಕೇಳಿದರೆ ಹೇಳಬಹುದು, ಎಲ್ಲಾ ಇಲಾಖೆಗಳೂ ಎಸ್.ಪಿ.ಡಿ. ಮೂಲಕವೇ ಖರೀದಿ ಮಾಡುವುದು, ಇರಿಗೇಷನ್, ಪಿ.ಹೆಚ್.ಇ., ಇಂಡಸ್ಟ್ರೀಸ್, ಅಗ್ರಿಕಲ್ಚರಲ್ ಯಾವುದೇ ಡಿಪಾರ್ಟ್‌ಮೆಂಟ್‌ನವರಾಗಲೀ ತಮಗೆ ಬೇಕಾದ ವಸ್ತು ಗಳನ್ನು ಅವರಿಂದ ತರಿಸಿಕೊಳ್ಳುತ್ತಾರೆ ಮಾನ್ಯ ಸದಸ್ಯರು ಅದರ ಬಗ್ಗೆ ಕೇಳಿದರೆ, ವಿವರಗಳನ್ನು ತರಿಸಿ ಉತ್ತರ ಕೊಡುತ್ತೇನೆ. If he bring particulars about any department, I am prepared to answer.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೧೮೧ (೪೯೦)

ಶ್ರೀ ಡಿ.ಎ. ಚಿನ್ನಪ್ಪ (ವಂಡಿಕೇರಿ).—ಮುಂದೂಡಲಾಗಿದೆ